REPAIR WORK OF B. R. B. C. DAM

874. SRI. HANJI SHIVANNA.—(Tarikere).—

Will the Minister of State for Major Irrigation be pleased to state:—

(*a*) the number of years ago, the B.R.B.C. Dam was constructed;

(*b*) the number of years ago, the Kannambadi Dam was constructed;

(*c*) whether it has come to the notice of the Government that water is leaking due to the crack in the B. R. B. C. Dam;

(*d*) when the repair work of this Dam would be taken up;

(*e*) as the sugarcane and garden crops which come under this project would be damaged if the said repair work is to be taken up before March whether the work would be taken up after the said period?

SRI H. N. NANJE GOWDA.--(MINISTER OF STATE FOR MAJOR IRRIGATION)

(*a*) There is no B.R.R.B.C. Anicut but there is a reservoir constructed acrose Bhadra River.

(*b*) About 10 years

(*c*) There is no crack but water is coming through masonry joints, in the left bank sluice well.

(*d*) It is proposed to take up the repairs from April to June 1973.

(*e*) Yes.

ಶ್ರೀ. ಹಂಜಿ ಶಿವಣ್ಣ —(ಇ)ಗೆ ಉತ್ತರವಾಗಿ ಆ ಆಣೆಕಟ್ಟಿನಲ್ಲಿ ನೀರು ಸೋರುತ್ತಿರುವುದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದಕ್ಕೆ ಎಡದಂಡೆ ತೂಬು ಬಾವಿಯ ಈ ಕಲ್ಮಟ್ಟಣಿಯ ಜೋಡಣೆಯಿಂದ ಮಾತ್ರ ನೀರು ಬರುತ್ತಿದೆಯೆಂದು ಹೇಳಿದ್ದೀರಿ. ತೂಬು ಹತ್ತಿರ ಮೇಲಕ್ಕೆ ಈ ವರ್ಷ ಪೈರನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದುವರೆಗೆ ನೀರು ಅಲ್ಲಿ ಸೋರುತ್ತಿದ್ದರೂ ಪೈರು ಬೆಳೆಯುವುದಕ್ಕೂ ಕೂಡ ಅಲ್ಲಿನ ಅಧಿಕಾರಿಗಳು ಆನಾನುಕೂಲ ಮಾಡಿದ್ದಾರೆಂಬುದು ನಿಜವೇ ?

ಶ್ರೀ. ಎಚ್. ಎನ್. ನಂಜೇಗೌಡ.— ಶಾಸಕರು ಬಂದು ಹೇಳಿದ್ದಾರೆ. ಯಾವಾಗ ನೀರು ಬಿಡದೇಕೋ ಅಲ್ಲಿ ಆದನ್ನು ಬಿಡಿಸಿದ್ದೇವೆ. ಮಾನ್ಯ ಸದಸ್ಯರು ಈಗ ಹೊಸ ವಿಷಯವನ್ನು ಹೇಳುತ್ತಾ ಇದ್ದಾರೆ. ಅದನ್ನು ನೋಡುತ್ತೇನೆ.

ಶ್ರೀ. ಹಂಜಿ ಶಿವಣ್ಣ : ಹಿಂದೆ ಕೆಲವರು ಅಲ್ಲಿ ಬತ್ತದ ಬೆಳೆ ಹಾಕಬೇಕೆಂದರೆ ನೀರು ಕೊಡುವುದಿಲ್ಲವೆಂದು ಹೇಳುತ್ತಾರೆ. ಕೆಲವರಿಗೆ ಪೈರು ಹಾಕುವುದಕ್ಕೂ ಅನಾನುಕೂಲ ಮಾಡಿದ್ದಾರೆ. ಇಷ್ಟೊಂದು ಬೆಳೆಯಾಗತಕ್ಕ ಪ್ರದೇಶದಲ್ಲಿ ನೀರನ್ನು ಸಾಕಷ್ಟು ಒದಗಿಸದೇ ಹೋದರೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ?

ಶ್ರೀ. ಎಚ್. ಎನ್. ನಂಜೇಗೌಡ —ಆ ವಿವರಗಳು ಕನ್‌ಸಲ್ಟೇಟಿವ್ ಕಮಿಟಿಯಲ್ಲಿರುತ್ತದೆ. ಅವರ ಜೊತೆಯಲ್ಲಿ ನಾನು ಮಾತನಾಡಿ, ಅವರ ಅನುಮತಿ ಪಡೆದು ಎಲ್ಲ ಸಾಕಾರ್ಯಗಳನ್ನು ಕೊಡಲಾಗುತ್ತದೆ. ನೀರನ್ನು ಯಾವಾಗ ಬಿಡುತ್ತಾರೆಂದು ಹೊಸ ವಿಷಯವನ್ನು ಕೇಳುತ್ತಿದ್ದಾರೆ. ಆ ವಿವರಗಳು ನನ್ನಲ್ಲಿಲ್ಲ.

ಶ್ರೀ ಹಂಜಿ ಶಿವಣ್ಣ.—ಈಗ ತಪ್ಪಾಗಿದೆ. ಆ ತಪ್ಪನ್ನು ತಾವು ವಿಚಾರ ಮಾಡಿ ಇದರ ಬಗ್ಗೆ ಮುಂದೆ ಎಲ್ಲ ಸಾಕಾರ್ಯಗಳನ್ನು ಅವರಿಗೆ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ : ಏನೇನು ನ್ಯೂನತೆಗಳಿವೆಯೋ ಅವನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ನೀರು ಬಿಡುವುದಿಲ್ಲವೆಂದು ಹೇಳಿದ್ದರಿಂದ, ಅಲ್ಲಿ ಬತ್ತ ಬೆಳೆಯತಕ್ಕ ಅನೇಕ ಜಮೀನುಗಳಲ್ಲಿ ರಾಗಿ ಪೈರು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ. ಎಚ್. ಎನ್. ನಂಜೇಗೌಡ.—ಅನೇಕ ಕಡೆಗಳಲ್ಲಿ ಈಗಾಗಲೇ ರಿಪೇರಿ ಕಾಮಗಾರಿ ನಡೆಯುತ್ತಿವೆ. ಆದ್ದರಿಂದ ಮಾನ್ಯ ಸದಸ್ಯರ ಬಾಕಿ ಪ್ರಶ್ನೆಗಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ.

REPAIRS TO TANKS OF ANKOLA TALUK

929. SMT. RADHA BHAT (Ankola).—

Will the Minister for Community Development and Social Welfare be pleased to state :—

The number of tanks repaired by the Ankola Taluk Development Board of North Kanara District since last two years and the expenditure incurred thereon ?

SRI M. MALLIKARJUNA SWAMY—(Minister for Community Developments and Social Welfare.)

The Ankola Taluk Development Board has not spent any amount from its fund for repairing the tanks during 1971-72 and 1972-73. Out of 18 tanks proposed to be taken up for repairs from 74 INED funds during 1971-72 repair works in respect of 8 tanks costing Rs. 3,500 have been completed during 1972-73.

ಶ್ರೀಮತಿ ರಾಧಾ ಭಟ್.—ಇಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯವರು ಅವರ ನಿಧಿಯಿಂದ ಹಣವನ್ನು ಖರ್ಚು ಮಾಡಿಲ್ಲ ಎಂದು ಹೇಳಲಾಗಿದೆ. ಅಂದರೆ ಅವರಲ್ಲಿ ಹಣವಿರಲಿಲ್ಲವೇ ? ಆಥವಾ ಇದ್ದರೂ ಅವರು ಖರ್ಚು ಮಾಡಲಿಲ್ಲವೋ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇಲ್ಲಿ ತಾಲ್ಲೂಕು ಬೋರ್ಡಿನವರು ಕಳೆದ 2 ವರ್ಷಗಳಲ್ಲಿ 35 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಅವರ ಹಣದಲ್ಲಿ ಮೂರು ಸಾವಿರ ರೂಪಾಯಿಗಳನ್ನು ಈ ಕೆರೆ ಮತ್ತು ಬಂಡಾರಗಳ ರಿಪೇರಿಗಾಗಿ ಖರ್ಚು ಮಾಡಿದ್ದಾರೆ.

ಶ್ರೀಮತಿ ರಾಧಾ ಭಟ್.—ಈ ಐನ್. ಇ. ಡಿ. ನಿಧಿಯಿಂದ 18 ಕೆರೆಗಳನ್ನು ದುರಸ್ತಿ ಮಾಡಬೇಕೆಂದು ತೀರ್ಮಾನವಾಗಿದ್ದರೂ ಇಲ್ಲಿ ಏಕೆ 8 ಕೆರೆಗಳನ್ನು ಮಾತ್ರ ರಿಪೇರಿ ಮಾಡಿ ಇನ್ನು 10 ಕೆರೆಗಳ ಕೆಲಸವನ್ನು ಹಾಗೆ ಕೈಬಿಟ್ಟಿದ್ದಾರೆ?